ದಿನಾಂಕಃ 27-6-2016 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಸ್ ಎ ಬಿ ವಕೀಲರಿಂದಃ-

1. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಪತ್ರ ಬರವಣಿಗೆ ಅಲ್ಲದೇ ರಾಜಕೀಯದಲ್ಲಿ ಸಕ್ರಿಯವಾಗಿ ಇದ್ದೇನೆ. ನಾನು ಕಾರ್ಪೊರೇಟರ್ ಚುನಾವಣೆಯನ್ನು ಮೋಸದಿಂದ ಗೆದ್ದಿದ್ದೇನೆ ಎಂದು ತಿಪ್ಪೇರುದ್ರ ವಕೀಲರು ನನ್ನ ಮೇಲೆ ಎಲೆಕ್ಷನ್ ಪಿಟಿಷನ್ ಹಾಕಿ ಜಿಲ್ಲಾ ನ್ಯಾಯಾಲಯದಲ್ಲಿ ನನ್ನ ವಿರುದ್ದ ಗೆದ್ದಿದ್ದಾರೆ ಎಂದರೆ ಸರಿ .

2. ನನಗೆ ಕಂದಿರಾಮರೆಡ್ಡಿ ಸುಮಾರು ವರ್ಷಗಳಿಂದ ಪರಿಚಯ ಎಂದರೆ ಸರಿ . ಈ ದಿವಸವೂ ಕಂದಿರಾಮರೆಡ್ಡಿರವರ ಜೊತೆ ನಾನು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರುಗಳಾದ ಗೋಪಾಲರೆಡ್ಡಿ ಮತ್ತು ಕೆ ವೀರಾರೆಡ್ಡಿಯವರ ಪರಿಚಯವೂ ನನಗೆ ಇದೆ ಎಂದರೆ ಸರಿ . ಕಂದಿರಾಮರೆಡ್ಡಿಯವರಿಗೆ ಪ್ರಸ್ತುತ ದಾವೆಯಲ್ಲಿನ ಬರೆದುಕೊಟ್ಟಿದ್ದೇನೆ ಎಂದಿರುವ ನಿಃಪಿ-1ನ್ನು ಹೊರತುಪಡಿಸಿ ನಾನು ಇನ್ನೂ ಸುಮಾರು ದಾಖಲೆಗಳನ್ನು ನಾನು ಕಂದಿರಾಮರೆಡ್ಡಿಯವರಿಗೆ ಬರೆದುಕೊಟ್ಟಿದ್ದೇನೆ. ನಾನು ಕಂದಿರಾಮರೆಡ್ಡಿಯ ಹಿತೈಷಿ ಎಂದರೆ ಸರಿಯಲ್ಲ.

3. ನಿಃಪಿ-1ನ್ನು ನಾನು 2012 ರಲ್ಲಿ ಕಂದಿರಾಮರೆಡ್ಡಿಯವರ ಮಾಹಿತಿಯ ಮೇರೆಗೆ ಬರೆದಿದ್ದೇನೆ ಎಂದರೆ ಸರಿಯಲ್ಲ. ರಾಮರೆಡ್ಡಿ ಹಾಗೂ ನಾಗಿರೆಡ್ಡಿ ಕೂಡಿ ಬಂದ ನಂತರವೇ ದಾಖಲೆಯನ್ನು ಬರೆದಿದ್ದೇನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನಾನು ಬರೆದ ನಂತರ ನಿಃಪಿ-1 ನ್ನು 2012 ರಲ್ಲಿಯೇ ಕಂದಿರಾಮರೆಡ್ಡಿ ,ಗೋಪಾಲರೆಡ್ಡಿ ಮತ್ತು ವೀರಾರೆಡ್ಡಿಯವರಿಗೆ ಓದಿ ಹೇಳಿದ ನಂತರವೇ ಬಿಕಲಂದಾರನಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ . ನಿಃಪಿ-1ನ್ನು ಕಪ್ಪು

ಇಂಕಿನ ಪೆನ್ನಿನಲ್ಲಿ ಬರೆದಿದ್ದೇನೆ. ದಾಖಲೆಯ ಎಲ್ಲಾ ಸಾಕ್ಷಿಗಳಾದ ಕಂದಿರಾಮರೆಡ್ಡಿ , ಗೋಪಾಲರೆಡ್ಡಿ ,ವೀರಾರೆಡ್ಡಿರವರು ನಾನು ಬರೆದ ಪೆನ್ನಿನಿಂದ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಮಾತ್ರ ಬಿಕಲಂದಾರನಾಗಿ ಕಪ್ಪು ಪೆನ್ನಿನಿಂದ ಸಹಿ ಮಾಡಿದ್ದೇನೆ. ನಿಃಪಿ-1ನ್ನು ಬರೆಯಲು 2012 ರಲ್ಲಿ ಅಂದಾಜು ಅರ್ಧ ಗಂಟೆ ಸಮಯ ತೆಗೆದುಕೊಂಡಿದ್ದೇನೆ. ಬೆಳಿಗ್ಗೆ 10ವರೆಯ ನಂತರದಿಂದ ಆರಂಭವಾಗಿ 11 ಗಂಟೆ ವರೆಗೆ ಮುಗಿದಿದೆ.

4. ನಿಃಪಿ-1ನ್ನು 2012 ರಲ್ಲಿ ಬರೆಯುವಾಗ ಕಂದಿರಾಮರೆಡ್ಡಿ ಪಹಣಿ ತಂದಿದ್ದರು. ಅದನ್ನು ನೋಡಿ ಅವರೇ ತಂದಿದ್ದ ಬಾಂಡ್ ಪೇಪರ್ ಮೇಲೆ ನಿಃಪಿ-1 ತಯಾರಿಸಿದ್ದೇನೆ. ನಿಃಪಿ-1ರಲ್ಲಿರುವ ಎರಡೂ ಬಾಂಡ್ ಪೇಪರ್‌ಗಳ ಮೇಲಿರುವ ಮುದ್ರೆಯ ಎಡಭಾಗದಲ್ಲಿ ರಾಮಿರೆಡ್ಡಿಯವರ ಸಹಿ ಎರಡೂ ಬಾಂಡ್‌ಪೇಪರ್‌ಗಳಲ್ಲಿ ಇದೆ ಎಂದರೆ ಸರಿ . ಸಾಮಾನ್ಯವಾಗಿ ನಿಃಪಿ-1ರ ಬಾಂಡ್‌ಗಳ ಮೇಲಿರುವ ಕೆ ರಾಮಿರೆಡ್ಡಿಯವರ ಸಹಿಯ ಜಾಗದಲ್ಲಿ ಬಾಂಡ್ ಪತ್ರಗಳನ್ನು ವಿತರಣೆ ಮಾಡಿದವರು ವಿತರಣೆ ಮಾಡುತ್ತಾರೆ ಎಂದರೆ ಸರಿ .

5. 2012ರಲ್ಲಿ ನಿಃಪಿ-1 ರಂತಹ ಬಾಂಡ್ ಪೇಪರ್‌ಗಳ ವಿತರಣೆ ಸರ್ಕಾರದವರು ಸ್ಥಗಿತ ಮಾಡಿದರು ಎಂದರೆ ಸರಿ. ಬಳ್ಳಾರಿ ಉಪನೋಂದಣಾಧಿಕಾರಿಗಳ ಉಬ್ಬಚ್ಚು ಯಂತ್ರದ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಬಳ್ಳಾರಿಯಲ್ಲಿ ಸ್ಟಾಂಪ್ ಪೇಪರ್‌ನ್ನು ಎಲ್ಲಿ ಖರೀದಿಸಿದ್ದೀರಿ ಎಂದು ಕೇಳಲಿಲ್ಲ.

6. ನಿಃಪಿ-1ರ ಬಾಂಡ್ ಪೇಪರ್‌ನ್ನು ನಾನು ಕಂದಿರಾಮರೆಡ್ಡಿ , ಗೋಪಾಲರೆಡ್ಡಿ ಮತ್ತು ವೀರಾರೆಡ್ಡಿಯವರು ಬಳ್ಳಾರಿಯಲ್ಲಿಯೇ ತಯಾರು ಮಾಡಿದ್ದೇವೆ ಎಂದರೆ ಸರಿಯಲ್ಲ. ಇದು ಅಲ್ಲದೇ ಇನ್ನೂ ಸುಮಾರು ಬಾಂಡ್ ಪೇಪರ್‌ಗಳನ್ನು ಸೃಷ್ಟಿಸಿ ನಾವು ಬಳ್ಳಾರಿಯ ಜನತೆಗೆ ವಿತರಿಸಿದ್ದೇವೆ ಎಂದರೆ ಸರಿಯಲ್ಲ. ನಾನು , ಕಂದಿರಾಮರೆಡ್ಡಿ ವೀರಾರೆಡ್ಡಿ ಹಾಗೂ ಗೋಪಾಲರೆಡ್ಡಿರವರು ಸೇರಿಕೊಂಡು ಸರ್ಕಾರಕ್ಕೆ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾಗಿರೆಡ್ಡಿಯ ಆಸ್ತಿ ಹೊಡೆದುಕೊಳ್ಳುವ ಉದ್ದೇಶದಿಂದ ನಿಃಪಿ-1ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

7. ನಿಃಪಿ-1 ಸೃಷ್ಟಿ ಮಾಡಿದ್ದಾರೆ ಎಂದು ಆಪಾದಿಸಿ ನಾಗಿರೆಡ್ಡಿಯವರು ದಿಃ 31–1–2013 ರಂದು ನನ್ನ , ಕಂದಿರಾಮಿರೆಡ್ಡಿ , ಗೋಪಾಲರೆಡ್ಡಿ ಹಾಗೂ ವೀರಾರೆಡ್ಡಿಯವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪೋಲಿಸ್‌ನವರು ಯಾವುದೇ ಕ್ರಯ ಜರುಗಿಸಿಲ್ಲ ಎಂದು ನಾಗಿರೆಡ್ಡಿಯವರು ನಮ್ಮ ವಿರುದ್ಧ ಖಾಸಗಿ ದೂರನ್ನು ಸಹಾ ನ್ಯಾಯಾಲಯದಲ್ಲಿ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಃಪಿ-1 ರಲ್ಲಿರುವ ನಿಃಪಿ-(ಎ) ಸಹಿ ನಾಗಿರೆಡ್ಡಿ ಎಂದು ಕೆ.ರಾಮಿರೆಡ್ಡಿಯವರೇ ಮಾಡಿದ್ದಾರೆ ಎಂದರೆ ಸರಿಯಲ್ಲ. 2012 ರಲಿಸ್ಲಿ ನನ್ನ ಸಮಕ್ಷಮ ನಿಃಪಿ-1(ಎ) ರಂತೆ ನಾಗಿರೆಡ್ಡಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಹಾಜರು ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಾಗಿರೆಡ್ಡಿ ಎಂದೂ ಹಾಜರಾಗಿಲ್ಲ ಹಾಗೂ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ನಾಗಿರೆಡ್ಡಿಗೆ ಮೋಸ ಮಾಡುವ ಉದ್ದೇಶದಿಂದ ಕಂದಿರಾಮಿರೆಡ್ಡಿ ಒದು ಮಾತುಕಟ್ಟಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಃಪಿ-1 ಕ್ಕೂ ಹಾಗೂ ನಿಃಪಿ-1(ಎ) ಸಹಿಗೂ ಹಾಗೂ ನಾಗಿರೆಡ್ಡಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಕಂದಿರಾಮಿರೆಡ್ಡಿ , ವೀರಾರೆಡ್ಡಿ , ಗೋಪಾಲರೆಡ್ಡಿ ಸೇರಿಕೊಂಡು ಬೆಂಗಳೂರು ಶಿವಾಜಿನಗರದ ಉಪನೊಂಣಾಧಿಕಾರಿ ಕಚೇರಿಯಿಂದ ಪಡೆದಿರುವಂತೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ

2ನೇ ಹೆ ಓ ಸಿವಿಲ್ ಜಡ್ಜ್ ,ಬಳ್ಳಾರಿ